ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಸಿಬ್ಬಂದಿ/ಸಿಆರ್-08/ಯಾದಗಿರಿ/ಖಾ.ಪೂ.ಸೇ/2017-18(ಭಾಗ-02) ದಿನಾಂಕ: 31-01-2018

## ಜ್ಞಾಪನ

ವಿಷಯ: 2013ನೇ ಸಾಲಿನಲ್ಲಿ ನೇಮಕಗೊಂಡ ಉಪನ್ಯಾಸಕರ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸುವ ಬಗ್ಗೆ.

ಉಲ್ಲೇಖ:
1. ಪದವಿ ಪೂರ್ವ ಶಿಕ್ಷಣ ಇಲಾಖೆ, ವಿಶೇಷ ನೇಮಕಾತಿ ಅಧಿಸೂಚನೆ: ಪಪೂಶಿ ಸಿಬ್ಬಂದಿ-1 ವಿಶೇಷ ನೇಮಕ 01/2011-12 ದಿನಾಂಕ: 13-04-2012.
2. ವಿಶೇಷಾಧಿಕಾರಿಗಳ ಕಛೇರಿ, ಕೇಂದ್ರಿಕೃತ ದಾಖಲಾತಿ ಘಟಕ, ಬೆಂಗಳೂರು ಇವರ ಪತ್ರ: ಸಿಎಸಿ 4/ಪಪೂಶಿ/ನೇ/01/2012-13 ದಿನಾಂಕ 13-02-2012.
3. ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಪಪೂಶಿ ಸಿಬ್ಬಂದಿ-2 ವಿಶೇಷ ನೇಮಕ 01/2011-12 (ಭಾಗ-2) ದಿನಾಂಕ 27-06-2013.
4. ಉಪ ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಯಾದಗಿರಿ ಜಿಲ್ಲೆ ಇವರಿಂದ ಸಲ್ಲಿತವಾದ ಪ್ರಸ್ತಾವನೆಗಳ ಮೇರೆಗೆ.

—*—

**ಪ್ರಸ್ತಾವನೆ:**

2013ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ ವಿಶೇಷಾಧಿಕಾರಿಗಳ ಕಚೇರಿ, ಕೇಂದ್ರೀಕೃತ ದಾಖಲಾತಿ ಘಟಕದಿಂದ ನೇಮಕಾತಿ ಹೊಂದಿ, ಉಲ್ಲೇಖ: 3ರ ಆದೇಶದಂತೆ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಉಪನ್ಯಾಸಕರು, ನಾಲ್ಕು ವರ್ಷಗಳ ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರುವರೆಂದು ಘೋಷಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ಶಿಫಾರಸ್ಸಿನೊಂದಿಗೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ:**

ಈ ಕೆಳಕಂಡ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರ ಹೆಸರಿನ ಮುಂದೆ ವಿವರಿಸಿದಂತೆ ನಾಲ್ಕು ವರ್ಷಗಳ ಪರಿವೀಕ್ಷಣಾ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರುವ ಪ್ರಯುಕ್ತ ಸದರಿಯವರ ಪರಿವೀಕ್ಷಣಾ ಅವಧಿಯನ್ನು ಕರ್ನಾಟಕ ನಾಗರಿಕ ಸೇವಾ (ಪರೀಕ್ಷಾರ್ಥ) ನಿಯಮಗಳು 1977ರ ನಿಯಮ 5 (1) (ಎ) ಅನ್ವಯ ತೃಪ್ತಿಕರವಾಗಿ ಪೂರೈಸಿದ್ದಾರೆಂದು ಘೋಷಿಸಲಾಗಿದೆ. ಈ ಮಾಹಿತಿಯನ್ನು ಸಂಬಂಧಪಟ್ಟ ಉಪನ್ಯಾಸಕರ ಸೇವಾ ಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವಂತೆ ಸಂಬಂಧಪಟ್ಟ ಕಾಲೇಜು ಪ್ರಾಂಶುಪಾಲರಿಗೆ ತಿಳಿಸಿದೆ.

| ಕ್ರಮ ಸಂಖ್ಯೆ | ಉಪನ್ಯಾಸಕರ ಹೆಸರು ಮತ್ತು ವಿಳಾಸ ಶ್ರೀಮತಿ/ಶ್ರೀ | ನೇಮಕಾತಿ ದಿನಾಂಕ | ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಪೂರೈಸಿದ ದಿನಾಂಕ | ಖಾಯಂ ಪೂರ್ವ ಸೇವಾವಧಿಯನ್ನು ತೃಪ್ತಿಕರವೆಂದು ಘೋಷಿಸಿದ ದಿನಾಂಕ |
|---|---|---|---|---|
| 1 | 2 | 3 | 4 | 5 |
| 01. | ಡಾ. ಮಂಜುನಾಥ, ಭೌತಶಾಸ್ತ್ರ ಉಪನ್ಯಾಸಕರು. ಸರ್ಕಾರಿ ಪದವಿ ಪೂರ್ವ ಕಾಲೇಜು, ಶಹಾಪೂರ, ಯಾದಗಿರಿ ಜಿಲ್ಲೆ. | **29-06-2013** | **28-06-2017** | **29-06-2017** |
| 02. | ದಯಾನಂದ ಟಿ. ರಸಾಯನಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಭಿಮರಾಯನಗುಡಿ, ಶಹಾಪುರ ತಾಲ್ಲುಕು, ಯಾದಗಿರಿ ಜಿಲ್ಲೆ. | **01-07-2013** | **30-06-2017** | **01-07-2017** |

| | | | | |
|---|---|---|---|---|
| ೦3. | **ಸವಿತಾ ಶಿವಾನಂದ, ಕನ್ನಡ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕೋಡೆಕಲ್, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ.** | **10-07-2013** | **09-07-2017** | **10-07-2017** |

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1. ಮಹಾಲೇಖಪಾಲರು, (ಎ & ಇ)-ಕರ್ನಾಟಕ, ಪಾರ್ಕ್‌ಹೌಸ್ ಬೆಂಗಳೂರು.
2. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಯಾದಗಿರಿ ಜಿಲ್ಲೆ.
3. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ, ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು – ಇವರಿಗೆ ಅಂತರ್ಜಾಲದಲ್ಲಿ ಅಳವಡಿಸಲು.
4. ಪ್ರಾಂಶುಪಾಲರು, ಸರ್ಕಾರಿ ಪದವಿ ಪೂರ್ವ ಕಾಲೇಜು,___________________ ಯಾದಗಿರಿ ಜಿಲ್ಲೆ. **ಮೂಲ ಸೇವಾ ಪುಸ್ತಕವನ್ನು** ಮುಂದಿನ ಕ್ರಮಕ್ಕಾಗಿ ಹಿಂತಿರುಗಿಸಿದೆ.
5. ಸಂಬಂಧಿಸಿದ ಸಿಬ್ಬಂದಿಗಳಿಗೆ – ಪ್ರಾಂಶುಪಾಲರ ಮೂಲಕ.
6. ಕಛೇರಿ ಪ್ರತಿ.